ಸಿ.ಮಿಸ್ಃ 21/2017

**ಪಿ ಡಬ್ಲ್ಯೂ: 1**

**(ಇಂದು ದಿನಾಂಕಃ 23-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಎದುರುದಾರರ ಪರ ವಕೀಲರಾದ ಶ್ರೀ ವಿ.ವಿ.ಎನ್ ರವರಿಂದಃ**

1. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ಈ ಕೇಸನ್ನು ವಿಭಾಗ ಕೋರಿ ಸಲ್ಲಿಸಿರುತ್ತೇನೆ. ನನ್ನ ತಂದೆ ಶಂಕರನಾಯಕ್. 2012 ರಲ್ಲಿ ನಾನು ದಾವೆಯನ್ನು ದಾಖಲಿಸಿರುತ್ತೇನೆ. ಸದರಿ ದಾವೆಯಲ್ಲಿ ಪ್ರತಿ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ಸದರಿ ದಾವೆಯ 2ನೇ ಪ್ರತಿವಾದಿಯ ಹೆಸರು ನನಗೆ ಗೊತ್ತಿಲ್ಲ. ಅಸಲು ದಾವಾ ನಂಬರ್ 218/2012 ವಿಚಾರಣೆಗೆ ಯಾವ ದಿನಾಂಕದಂದು ನಿಗದಿಯಾಗಿತ್ತು ಎಂದು ನನಗೆ ಗೊತ್ತಿಲ್ಲ.

2. ಸದರಿ ದಾವೆ ವಿಚಾರಣೆಗಾಗಿ ದಿಃ30.01.2017 ರಂದು ನಿಗದಿಯಾಗಿತ್ತು. ಸಾಕ್ಷಿಯು ಮುಂದುವರೆದು ಆ ದಿನ ನನಗೆ ಹುಷಾರಿಲ್ಲ ಕಾರಣ, ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನಾಂಕಂದು ನನಗೆ ಹುಷಾರಿಲ್ಲ ಎಂದು ನಮ್ಮ ವಕೀಲರು ತಿಳಿಸಿದ ಕಾರಣ, ಮುಂದಿನ ವಿಚಾರಣೆಗಾಗಿ ದಿಃ24.04.2017 ಕ್ಕೆ ಮುಂದೂಡಲಾಗಿತ್ತು ಎಂದರೆ ಸಾಕ್ಷಿ ಆ ದಿನ ಹುಷಾರಿಲ್ಲದ ಕಾರಣ, ಆಸ್ಪತ್ರೆಗೆ ಹೋಗಿರುತ್ತೇನೆ ಎಂದು ಹೇಳುತ್ತಾರೆ.

3. ನಂತರ ಮುಂದಿನ ವಿಚಾರಣೆಗಾಗಿ ದಿಃ 08.06.2017 ಕ್ಕೆ ಪ್ರಕರಣ ಮುಂದೂಡಲಾಗಿದ್ದು, ಆ ದಿನ ನಾನು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ನಂತರ ದಿಃ29.06.2017 ಕ್ಕೆ ವಿಚಾರಣೆಯನ್ನು ಮುಂದೂಡಲಾಗಿದ್ದು, ಆ ದಿನವೂ ಸಹ ನಾನು ನ್ಯಾಯಾಲಯಕ್ಕೆ

ಹಾಜರಾಗಿರುತ್ತೇನೆ. ನಂತರ ವಿಚಾರಣೆಯನ್ನು ದಿಃ 13.11.2017 ಕ್ಕೆ ಮುಂದೂಡಲಾಗಿತ್ತು ಎಂದರೆ ಸರಿ. ಈ ಮೇಲೆ ಹೇಳಿದ ದಿನಾಂಕಗಳಲ್ಲಿ ನಾನು ವಿಚಾರಣೆ ಮಾಡಿದ ಕಾರಣ, ನ್ಯಾಯಾಲಯ ದಿಃ 21.11.2017 ಕ್ಕೆ ವಿಚಾರಣೆ ಮುಂದೂಡಲಾಗಿತ್ತು ಎಂದರೆ ಸರಿ.

4. ನನಗೆ ಆರೋಗ್ಯ ಸರಿಯಿಲ್ಲದ ಕಾರಣ ಚಂದ್ರಮೌಳಿ ಆಸ್ಪತ್ರೆಗೆ ಹೋಗಿದ್ದೆ. ದಿಃ 30.01.2017 ರಂದು ನಾನು ಆಸ್ಪತ್ರೆಗೆ ಹೋಗಿದ್ದೆ. ಆ ದಿನ ನನಗೆ ವೈದ್ಯರು ಚಿಕಿತ್ಸೆ ನೀಡಿದ್ದರು. ವೈದ್ಯರು ಚಿಕಿತ್ಸೆ ನೀಡಿ ಮಾತ್ರೆಗಳನ್ನು ತೆಗೆದುಕೊಳ್ಳುವಂತೆ ನನಗೆ ಹೇಳಿದ್ದರು. ನಾನು ದಿಃ 30.01.2017 ರಿಂದ 3 ದಿನ ಆಸ್ಪತ್ರೆಗೆ ಹೋಗಿದ್ದೆ ಎಂದರೆ ಸಾಕ್ಷಿ ನನ್ನ ಮಗಳ ಮನೆಯಲ್ಲಿದ್ದೆ ಎಂದು ನುಡಿಯುತ್ತಾರೆ. 2017 ರಲ್ಲಿ ಚಂದ್ರಮೌಳಿ ಆಸ್ಪತ್ರೆ ಹೊರತುಪಡಿಸಿ, ಹೊಳೆನರಸೀಪುರದಲ್ಲೂ ರವಿ ವೈದ್ಯರ ಹತ್ತಿರ ಚಿಕಿತ್ಸೆ ಪಡೆದುಕೊಂಡಿದ್ದೆ. ಚಂದ್ರಮೌಳಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ 4 ದಿನಗಳ ನಂತರ ರವಿ ವೈದ್ಯರ ಹತ್ತಿರ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ನಂತರ ನನ್ನ ಆರೋಗ್ಯ ಸರಿಯಾಗಿರುತ್ತದೆ.

5. 2017 ರಲ್ಲಿ ಬೇರೆ ಆಸ್ಪತ್ರೆಗೆ ಹೋಗಿದ್ದೀರಾ ಎಂದರೆ ಸಾಕ್ಷಿಯು ಹಾಸನದ ಆಸ್ಪತ್ರೆಯಲ್ಲಿ ಬಿಪಿ, ಶುಗರ್ ಕಾಯಿಲೆಗಳಿಗೆ ತೋರಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಚಿಕಿತ್ಸೆ ಪಡೆದುಕೊಂಡ ಬಗ್ಗೆ ಎಲ್ಲಾ ದಾಖಲೆಗಳು ಇರುತ್ತವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗುತ್ತದೆ ಎಂದರೆ ಸಾಕ್ಷಿಯು ಇರುವ ದಾಖಲೆಗಳನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ವೈದ್ಯಕೀಯ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ.

6. ನಾನು ಚಂದ್ರಮೌಳಿ ಆಸ್ಪತ್ರೆಗೆ ಒಮ್ಮೆ ಹೋಗಿರುತ್ತೇನೆ. ನಿಪಿ-2 ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2017 ರಲ್ಲಿ ನಾನು ಆರೋಗ್ಯವಾಗಿದ್ದು, ನಾನು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ನಂಬರ್ 218/2012 ದಾವೆ ಯಾವ ಕಾರಣಕ್ಕಾಗಿ ವಜಾ ಆಯಿತು ಎಂದರೆ ಸಾಕ್ಷಿ ನಾನು ಹುಷಾರಿಲ್ಲದ ಕಾರಣ, ನ್ಯಾಯಾಲಯಕ್ಕೆ ಬರದ ಕಾರಣ ವಜಾ ಆಗಿರುತ್ತದೆ ಎಂದು ನುಡಿಯುತ್ತಾರೆ. ಮಲ್ಲಿಗನಾಯಕ ಕುಟುಂಬದವರಿಗೆ ತೊಂದರೆ ಕೊಡಲು ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-- ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**(ನಾಗೇಂದ್ರ)**
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**